O.S. ನಂಬರಃ 90/2023

ಪಿ. ಡಬ್ಲ್ಯೂಃ 1

ದಿಃ 23-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಮ್.ಎ.ಆರ್. ವಕೀಲರಿಂದಃ

ಶೇಖ್ ಉಸ್ಮಾನ್ ಕಮಲ್ ರವರಿಗೆ ಮದ್ರಾಸಿಗೆ ಕಣ್ಣಿನ ಚಿಕಿತ್ಸೆಗೆ ಕರೆದುಕೊಂಡು ಹೋದಾಗ 2 ನೇ ಪ್ರತಿವಾದಿ ಬಂದಿರಲಿಲ್ಲ. ಮದ್ರಾಸಿಗೆ ಕರೆದುಕೊಂಡ ಹೋದ 15-ದಿವಸಗಳ ನಂತರ ಕಣ್ಣಿನ ಆಪರೇಷನ್ ಮಾಡಿರುತ್ತಾರೆ. ಆ ಕುರಿತು ದಾಖಲೆ ಇದೆಯೇ ಎಂದರೆ ಸಾಕ್ಷಿ ಅವರನ್ನು ಕರೆದುಕೊಂಡ ಬಂದ ನಂತರ ದಾಖಲೆಗಳನ್ನು ಅವರ ಬಳಿಯೇ ಇಟ್ಟಿದ್ದೆ ಎಂದು ಹೇಳುತ್ತಾರೆ. ವೈದ್ಯರ ಹೆಸರು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಂಗ್ಲೀಷ ಬರುವುದಿಲ್ಲ ಎಂದು ಹೇಳುತ್ತಾರೆ. ಶೇಖ್ ಉಸ್ಮಾನ್ ಕಮಲ್ ನನಗೆ ಹಾಗೂ 2 ನೇ ಪ್ರತಿವಾದಿಗೆ ಸಂಬಂಧಿ ಅಲ್ಲ ಎಂದರೆ ಸಾಕ್ಷಿ ಆತ ನನ್ನ ಮಾಲೀಕ ಎಂದು ಹೇಳುತ್ತಾರೆ. ಮದ್ರಾಸ ನಲ್ಲಿ ಕಣ್ಣಿನ ಚಿಕಿತ್ಸೆ ಮಾಡಲು ಒಪ್ಪಿಗೆ ಸಹಿ ನೀಡುವಂತೆ ವೈದ್ಯರು ತಿಳಿಸಿದಾಗ ಶೇಖ್ ಉಸ್ಮಾನ್ ಕಮಲ್ ಈತನಿಗೆ ಕಣ್ಣು ಕಾಣಿಸದ ಕಾರಣ ಸಹಿ ಮಾಡಲು ಆಗದೇ ನಾನು ಮತ್ತು 2 ನೇ ಪ್ರತಿವಾದಿ ಶೇಖ್ ಉಸ್ಮಾನ್ ಕಮಲ್ ರವರ ರಕ್ತ ಸಂಬಂಧಿಕರಲ್ಲದ ಕಾರಣ ನಮ್ಮ ಸಹಿ ಮೇಲೆ ಚಿಕಿತ್ಸೆ ನೀಡಲಾಗುವುದಿಲ್ಲವೆಂದು ವೈದ್ಯರು ತಿಳಿಸಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಒಂದು ವಾರದ ನಂತರ ಕಣ್ಣಿನ ಆಪರೇಷನ್

ಮಾಡಿರುತ್ತಾರೆ, ಅಲ್ಲಿಯವರೆಗೆ ರಾಘವೇಂದ್ರ ಹೊಟೇಲನಲ್ಲಿ ತಂಗಿದ್ದೇವು, 2 ನೇ ಪ್ರತಿವಾದಿ ಆ ಸಮಯದಲ್ಲಿ ಮಧ್ರಾಸಿಗೆ ಬಂದಿಲ್ಲ ಎಂದು ಹೇಳುತ್ತಾರೆ. ಕೇವಲ 5–ದಿವಸ ಮಧ್ರಾಸಿನಲ್ಲಿ ಉಳಿದಿದ್ದೀರಿ ಎಂದರೆ ಸಾಕ್ಷಿ 30–ದಿವಸ ತಂಗಿದ್ದೇವು ಮತ್ತು ಇನ್ನೊಂದು ಸಾರಿ ಬರಬೇಕು ಎಂದಾಗ ಸಹ ಹೋಗಿದ್ದೆ ಎಂದು ಹೇಳುತ್ತಾರೆ. ಮಧ್ರಾಸಿನ ಯಾವ ಆಸ್ಪತ್ರೆಯಲ್ಲಿ ಹೋಗಿದ್ದೀರಿ ಎಂದರೆ ಅಲ್ಲೆಲ್ಲಾ ತಮಿಳು ಭಾಷೆ ಇರುವುದರಿಂದ ಹೆಸರು ಗೊತ್ತಾಗಿಲ್ಲ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿಯೇ ಔಷಧಿ ಪೂರೈಕೆ ಇದ್ದು, ಪ್ರತ್ಯೇಕ ಔಷಧಿ ಚೀಟಿ ನೀಡುತ್ತಿರಲಿಲ್ಲ. ಶೇಖ್ ಉಸ್ಮಾನ್ ಕಮಲ್ ರವರಿಗೆ ಮಧ್ರಾಸಿನಲ್ಲಿ ಕಣ್ಣಿನ ಚಿಕಿತ್ಸೆ ಕೊಡಿಸಿಲ್ಲ, ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಶೇಖ್ ಉಸ್ಮಾನ್ ಕಮಲ್ ರವರ ಚಿಕಿತ್ಸೆಗೆ ಒಪ್ಪಿಗೆ ಸಹಿ ಇಲ್ಲದ ಕಾರಣ 5–ದಿನಗಳ ನಂತರ ನನಗೆ ಹಾಗೂ 2 ನೇ ಪ್ರತಿವಾದಿಗೆ ಮರಳಿ ಕರೆದುಕೊಂಡು ಹೋಗಿರಿ ಎಂದು ತಿಳಿಸಿರುತ್ತಾರೆಂದರೆ ಸರಿಯಲ್ಲ, ಸಾಕ್ಷಿ ಚಿಕಿತ್ಸೆಗೆ ನಾನೊಬ್ಬನೇ ಕರೆದುಕೊಂಡು ಹೋಗಿದ್ದೆ ಎಂದು ಹೇಳುತ್ತಾರೆ.

ಹೊಟೇಲಿನಲ್ಲಿ ಉಳಿದ ರಶೀದಿಯನ್ನೂ ಸಹ ಶೇಖ್ ಉಸ್ಮಾನ್ ಕಮಲ್ ರವರ ಚಿಕಿತ್ಸಾ ದಾಖಲೆಗಳ ಬ್ಯಾಗನಲ್ಲಿಯೇ ಇಟ್ಟಿದ್ದೆ. ಕಣ್ಣಿನ ಚಿಕಿತ್ಸೆ ಮಾಡಿದ ನಂತರ ಶೇಖ್ ಉಸ್ಮಾನ್ ಕಮಲ್ ರವರಿಗೆ ಕಣ್ಣು ಕಾಣಿಸುತ್ತಿತ್ತು. **ಶೇಖ್ ಉಸ್ಮಾನ್ ಕಮಲ್ ರವರ ಕಣ್ಣಿಗೆ ಏನಾಗಿತ್ತು ಎಂದು ನ್ಯಾಯಾಲಯ ಕೇಳಿದ ಪ್ರಶ್ನೆಗೆ ಸಾಕ್ಷಿ ಅವರ ಎರಡೂ ಕಣ್ಣುಗಳು ಕೆಂಪಾಗಿ ದೃಷ್ಟಿ ಹೀನವಾಗಿದ್ದು, ಇನ್ನೊಬ್ಬರ ಸಹಾಯವಿಲ್ಲದೇ ತಿರುಗಾಡಲು ಆಗುತ್ತಿರಲಿಲ್ಲ ಎಂದು ಹೇಳುತ್ತಾರೆ.** ಮಧ್ರಾಸಿನಲ್ಲಿ ಚಿಕಿತ್ಸೆ ನೀಡಿಲ್ಲ ಮತ್ತು ಅದರಿಂದ ಯಾವುದೇ ಗುಣಮುಖವಾಗಿಲ್ಲ ಎಂದರೆ ಸರಿಯಲ್ಲ. ಶೇಖ್ ಉಸ್ಮಾನ್ ಕಮಲ್ ರವರ ಕಣ್ಣಿನ ಚಿಕಿತ್ಸೆಗೆ

2 ನೇ ಪ್ರತಿವಾದಿ ರೂ.50,000/- ಹಣ ಸಹಾಯ ಮಾಡಿದ್ದ ಎಂದರೆ ಸರಿಯಲ್ಲ. ಸದರಿ ಹಣ ಸಹಾಯ ಮಾಡಿದ ನಂತರ ರೂ.1 ಲಕ್ಷಕ್ಕೆ ದಾವಾ ಆಸ್ತಿ ಕುರಿತಾಗಿ ಕರಾರು ಪತ್ರವನ್ನು ಶೇಖ್ ಉಸ್ಮಾನ್ ಕಮಲ್ ಈತನು 2 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದ ಎಂದರೆ ಸರಿಯಲ್ಲ. ಶೇಖ್ ಉಸ್ಮಾನ್ ಕಮಲ್ ಈತನು 2 ನೇ ಪ್ರತಿವಾದಿ ಅಣ್ಣನಾದ ಮೈನುದ್ದೀನ್ ಮಹಮ್ಮದ್ ಶೇಖನ ಸಲಹೆ ಪಡೆಯುತ್ತಿದ್ದ ಎಂದರೆ ಸರಿಯಲ್ಲ.

ಶೇಖ ಉಸ್ಮಾನ್ ಕಮಲ್ ರವರ ಕಣ್ಣಿನ ಶಸ್ತ್ರಚಿಕಿತ್ಸೆಗೆ ಅಂದಾಜು ರೂ. 1 ಲಕ್ಷ 20 ಸಾವಿರ ಖರ್ಚಾಗಿದೆ. ಹಣ ಖರ್ಚು ಮಾಡಿದ ತಿಂಗಳು, ಇಸ್ವಿ ಹೇಳಲು ಬರುವುದಿಲ್ಲ. ಚಿಕಿತ್ಸೆಗೆ ಹಣ ನೀಡಿದ ಬಗ್ಗೆ ಯಾವುದೇ ರಶೀದಿ ನನ್ನ ಬಳಿ ಇಲ್ಲ ಎಂದರೆ ಸರಿ. ನಾನು ಯಾವುದೇ ಹಣ ಖರ್ಚು ಮಾಡಿಲ್ಲ, 2 ನೇ ಪ್ರತಿವಾದಿ ನೀಡಿದ ರೂ.50,000/- ಹಣದಲ್ಲಿ ಏನೂ ಖರ್ಚು ಮಾಡದೇ ರೂ.25,000/- ಕಬಳಿಸಿದ್ದೇನೆ ಎಂದರೆ ಸರಿಯಲ್ಲ. ಮೃತ ಶೇಖ ಉಸ್ಮಾನ್ ಕಮಲ್ ಈತನನ್ನು 2004 ರಲ್ಲಿ ಒಂದು ದಿವಸ ಊಟಕ್ಕೆ ಕರೆದುಕೊಂಡು ಹೋಗಿ ಅಮಲು ಬರುವ ಪದಾರ್ಥ ಊಟದಲ್ಲಿ ಬೆರೆಸಿ, ನಂತರ ನನ್ನ ಹೆಂಡತಿಯನ್ನು ಮುಂದುಮಾಡಿ ಕೆಲವು ಕಾಗದಪತ್ರಗಳಿಗೆ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಒಂದು ಸಾರಿ ಮಾತ್ರ ಊಟಕ್ಕೆಂದು ಬಂದಿದ್ದರು, ಪ್ರತಿದಿವಸ ಆತನಿಗೆ ಬೇಕಾದ ಊಟವನ್ನು ಹಾಗೂ ಇತರ ಉಪಚಾರವನ್ನು ಮನೆಯಿಂದ ತೆಗೆದುಕೊಂಡು ಹೋಗಿ ನೀಡುತ್ತಿದ್ದೆ ಎಂದು ಹೇಳುತ್ತಾರೆ. ನಾನು ಅಮಲು ಬರುವ ಪದಾರ್ಥ ನೀಡಿದ ನಂತರದ ದಿನಗಳಲ್ಲಿ ಒಂದು ದಿವಸವೂ ಸಹ ಆತ ನಮ್ಮ ಕಡೆಯಿಂದ ನೀರನ್ನೂ ಸಹ ಕುಡಿದಿಲ್ಲ ಎಂದರೆ ಸರಿಯಲ್ಲ. ಅಮಲು ಪದಾರ್ಥ ನೀಡಿದ ದಿವಸ ನಾನೇ

ರಿಕ್ಷಾದಲ್ಲಿ ಶೇಖ ಉಸ್ಮಾನ್ ಕಮಲ್ ರವರನ್ನು ಆತನ ಮನೆಗೆ ಮುಟ್ಟಿಸಿದ್ದೆ ಎಂದರೆ ಸರಿಯಲ್ಲ. ಈ ಕುರಿತು ತದನಂತರ ಶೇಖ ಉಸ್ಮಾನ್ ಕಮಲ್ ನನ್ನ ಮತ್ತು ನನ್ನ ಹೆಂಡತಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆಂದರೆ ಸರಿಯಲ್ಲ. ತನ್ನ ಜೀವಕ್ಕೆ ಏನಾದರೂ ಅಪಾಯವಾದರೆ ನಾನು ಮತ್ತು ನನ್ನ ಹೆಂಡತಿ ಕಾರಣವೆಂದು ಪೊಲೀಸ್ ಪ್ರಕರಣದಲ್ಲಿ ಶೇಖ ಉಸ್ಮಾನ್ ಕಮಲ್ ಬರೆದುಕೊಂಡಿದ್ದ ಎಂದರೆ ಸರಿಯಲ್ಲ. ಆ ಸಮಯದಲ್ಲಿ 5-6 ತಿಂಗಳು ನಾನು ಊರು ಬಿಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಶೇಖ ಉಸ್ಮಾನ್ ಕಮಲ್ ನಿಗೆ ಅಮಲು ಪದಾರ್ಥ ನೀಡಿ ಬರೆಸಿಕೊಂಡ ಕಾಗದಪತ್ರಗಳು ನನ್ನ ಬಳಿ ಇರುತ್ತವೆ ಎಂದರೆ ಸರಿಯಲ್ಲ. ಇದೇ ಕಾರಣ ಮುಂದುಮಾಡಿ ಪತ್ರಿಕಾ ಪ್ರಕಟಣೆಯಲ್ಲಿ ನನ್ನ ಬಳಿ ಕಾಗದಪತ್ರ ಇರುತ್ತವೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಅಣ್ಣನೂ ಸಹ ತರಕಾರಿ ವ್ಯಾಪಾರ ಮಾಡುತ್ತಾನೆ ಎಂದರೆ ಸರಿ. ಗೋನ್ಸಾಲ್ವಿಸ್ ಎಂಬುವವರ ಅಂಗಡಿ ಬಾಡಿಗೆ ಪಡೆದು ತರಕಾರಿ ವ್ಯಾಪಾರ ಮಾಡುತ್ತಿದ್ದಾನೆ ಎಂದರೆ ಸಾಕ್ಷಿ ಬಾಡಿಗೆ ಅಂಗಡಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದು, ಅದರ ಮಾಲೀಕರ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಬಾಡಿಗೆ ಅಂಗಡಿ ಎದುರು ಸಹ ಇನ್ನೊಂದು ಅಂಗಡಿ ಬಾಡಿಗೆ ಪಡೆದು ದೊಡ್ಡ ಪ್ರಮಾಣದಲ್ಲಿ ಕಾಯಿಪಲ್ಯ ವ್ಯಾಪಾರ ಮಾಡುತ್ತಾನೆ ಹಾಗೂ ಪುರಸಭೆ ಕಟ್ಟದಲ್ಲಿಯೂ ಸಹ ಕಾಯಿಪಲ್ಯ ಅಂಗಡಿ ಇದೆ ಎಂದರೆ ಸರಿ. ದೊಡ್ಡ ಅಂಗಡಿಗೆ ಪ್ರತಿ ತಿಂಗಳು ರೂ.15,000/- ಬಾಡಿಗೆ ಇದೆ ಎಂದರೆ ಮಾಹಿತಿ ಇಲ್ಲ. 2 ನೇ ಪ್ರತಿವಾದಿ ಅಂಗಡಿ ಪಕ್ಕದಲ್ಲಿ ಆಚಾರ್ಯರವರ ಅಂಗಡಿಯ ಜಗಲಿ ಮೇಲೆಯೂ ಸಹ ಕಾಯಿಪಲ್ಯ ಮತ್ತು ರೆಡಿಮೆಡ್ ಬಟ್ಟೆ ವ್ಯಾಪಾರ ಮಾಡಲಾಗುತ್ತದೆ ಎಂದರೆ ಮಾಹಿತಿ ಇಲ್ಲ ಎಂದು

ಹೇಳುತ್ತಾರೆ. ಸದರಿ ಕಾಯಿಪಲ್ಯ ಮಾರುವವರು ಪ್ರತಿದಿನ ರೂ. 300/- ಬಾಡಿಗೆ ನೀಡುತ್ತಾರೆಂದರೆ ಮಾಹಿತಿ ಇಲ್ಲ.

ಈ ಹಿಂದೆ ಆದ ಮೂಲದಾವೆ ನಂ. 71/2001 ರಲ್ಲಿಯ ಸರ್ವೇ ನಂ. 438 ಇದು ಶೇಖ ಉಸ್ಮಾನ್ ಕಮಲ್ ರವರಿಗೆ ಸಂಬಂಧಪಟ್ಟಿದ್ದಲ್ಲ, ಅದು ಉಸ್ಮಾನ್ ಸಯ್ಯದ್ ಎಂಬುವ ಬೇರೆ ವ್ಯಕ್ತಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿ ಆ ದಾವೆಯಲ್ಲಿ ಸರ್ವೇ ನಂಬರ ತಪ್ಪಾಗಿ ನಮೂದಾಗಿದ್ದು, ದಾವಾ ಸರ್ವೇ ನಂಬರ ಕುರಿತಾಗಿಯೇ ಈ ಹಿಂದೆ ದಾವೆ ನಡೆದಿತ್ತು ಎಂದು ಹೇಳುತ್ತಾರೆ. ಈ ಮೊದಲು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಶೇಖ ಉಸ್ಮಾನ್ ಕಮಲ್ ಮೃತಪಡುವವರೆಗೂ ನಾನು ದಾವಾ ಆಸ್ತಿಯ ಜಗಲಿ ಕಟ್ಟೆಯ ಮೇಲೆ ವ್ಯಾಪಾರ ಮಾಡಿಲ್ಲ ಎಂದರೆ ಸರಿಯಲ್ಲ. ಶೇಖ ಉಸ್ಮಾನ್ ಕಮಲ್ ಈತ ದಾಖಲೆಗಳನ್ನು ಬರೆದುಕೊಟ್ಟಿದ್ದಾನೆಂದು ಸುಳ್ಳು ಹೇಳಿಕೊಂಡು ದಾವಾ ಆಸ್ತಿಯ ಜಗಲಿ ಕಟ್ಟೆ ಕಬ್ಜಾ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನನಗೀಗ 74 ವರ್ಷ. ನನಗೆ ಇದುವರೆಗೂ ಯಾವುದೇ ತರಹ ವಯೋ ಸಹಜ ಕಾಯಿಲೆಗಳು ಇರುವುದಿಲ್ಲ. ದಾವಾ ಆಸ್ತಿಯ ಮುಂಬದಿಯಲ್ಲಿರುವ ಕಾಯಿಪಲ್ಯ ವ್ಯಾಪಾರದ ಅಂಗಡಿಯನ್ನು ಹುಬ್ಬಳ್ಳಿಯ ರಿಯಾಜ್ ಎಂಬುವವರಿಗೆ ತರಕಾರಿ ವ್ಯಾಪಾರಸ್ಥನಿಗೆ ಬಾಡಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ರಿಯಾಜ್ ಕಡೆಯಿಂದ ಪ್ರತಿ

ದಿವಸ ರೂ.300/- ಬಾಡಿಗೆ ತೆಗೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವೃಧಾಪ್ಯ ಬಂದಿದ್ದರಿಂದ ನಿಂತುಕೊಂಡು ವ್ಯಾಪಾರ ಮಾಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಗತ್ಯ ಇಲ್ಲದಿದ್ದರೂ ಸಹ ಬಾಡಿಗೆ ಹಣ ಪಡೆಯಲು ದಾವೆ ಮುಂದುವರೆಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮನೆ ಹೊನ್ನೆಕೇರಿಯಲ್ಲಿದೆ. ಜುಲೇಖಾಬಿ ನನ್ನ ಅಕ್ಕ. ಸಾಕ್ಷಿ ಮುಂದುವರೆದು ಅವಳು ಮೃತಪಟ್ಟಿರುತ್ತಾಳೆ ಎಂದು ಹೇಳುತ್ತಾರೆ. ನನ್ನ ತಂದೆಯ ಮನೆ ಜಪ್ತಿಗೆ ಬಂದಾಗ ನನ್ನ ಅಕ್ಕನ ಗಂಡನ ಮನೆ ಆಸ್ತಿಯಿಂದ ಹಣ ಮರುಪಾವತಿಸಿದ್ದೇವೆ ಎಂದರೆ ಸರಿಯಲ್ಲ. ನನ್ನನ್ನು ಮತ್ತು ನನ್ನ ಸಹೋದರರನ್ನು ನನ್ನ ಅಕ್ಕ ಸಾಕಿ ಬೆಳೆಸಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕಬಳಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.